## ಓಂಕಾರೇಶ್ವರ ದೇವಸ್ಥಾನ

ಈ ದೇವಸ್ಥಾನವನ್ನು ಎರಡನೇ ಲಿಂಗರಾಜೇಂದ್ರ 1820ರಲ್ಲಿ ನಿರ್ಮಿಸಿದನು. ಇದನ್ನು ಇಂಡೊ ಸಾರ್ಸೆನಿಕ್ ಶೈಲಿಯಲ್ಲಿ ಕಟ್ಟಲಾಗಿದೆ. ಇದರ ಜೊತೆಗೆ ಮೇಲ್ಹಾವಣಿಯಲ್ಲಿ ಕೇರಳದ ಹೆಂಚಿನಿಂದ ಕೂಡಿದ ವಾಸ್ತುವಿನ್ಯಾಸ ಹಾಗೂ ಇಸ್ಲಾಮಿಕ್ ಶೈಲಿಯ ಗುಮ್ಮಟಗಳು ಇವೆ



## ನಾಲ್ಕುನಾಡು ಅರಮನೆ

ವರ್ಣಚಿತ್ರಗಳು ಹಾಗೂ ಕೆತ್ತನೆಗಳಿಗೆ ಹೆಸರಾದ ಪ್ರದೇಶ ಇದಾಗಿದೆ. ಯಾವಕಪಾಡಿ ಎಂಬ ಗ್ರಾಮದ ಬಳಿ ಇದು ಇದ್ದು ಕ್ರಿಸ್ತಶಕ 1792 ಹಾಗೂ 1794ರ ನಡುವೆ ನಿರ್ಮಾಣವಾಗಿದೆ. ಈಗ ಇದು ಪುರಾತತ್ವ ಇಲಾಖೆಯ ಸುಪರ್ದಿಯಲ್ಲಿದೆ.





## ದುಬಾರೆ ಆನೆ ಶಿಬಿರ

ಇದೊಂದು ವಿಶಿಷ್ಟವಾದ ಪರಿಸರ ಪ್ರವಾಸಿ ತಾಣವಾಗಿದೆ. ದುಬಾರೆ ಆನೆ ಶಿಬಿರವು ಆನೆಗಳ ವರ್ತನೆಯನ್ನು ಅಧ್ಯಯನ ಮಾಡುವ ಕೇಂದ್ರವಾಗಿದೆ. ಇಲ್ಲಿಗೆ ಭೇಟಿ ನೀಡುವವರು ಆನೆಗಳನ್ನು ಹತ್ತಿರದಿಂದ ನೋಡಿ ಅವುಗಳ ಬಗ್ಗೆ ಹೆಚ್ಚು ತಿಳಿಯಬಹುದಾಗಿದೆ. ಜೊತೆಗೆ, ಆನೆಗಳಿಗೆ ಆಹಾರ ತಿನ್ನಿಸುವುದು ಹಾಗೂ ಅವುಗಳಿಗೆ ಸ್ನಾನ ಮಾಡಿಸುವುದು ಸೇರಿದಂತೆ ಇನ್ನಿತರ ಚಟುವಟಿಕೆಗಳಲ್ಲಿ ಭಾಗವಹಿಸಬಹುದು.



## ಕೊಡಗು ಕುರಿತು

ಅತ್ಯಂತ ಎತ್ತರದ ಪರ್ವತಶ್ರೇಣಿ, ನದಿಗಳು, ತೊರೆಗಳು, ಅವುಗಳು ಉಕ್ಕಿಸುವ ನೊರೆಯಂತಹ ನೀರು, ಕಣಿವೆಗಳು, ಜಲಪಾತಗಳಿಂದ ಕೂಡಿದ ನಿಸರ್ಗ ರಮಣೀಯ ಪ್ರದೇಶವು ಕರ್ನಾಟಕ ರಾಜ್ಯದ ಪಶ್ಚಿಮ ಘಟ್ಟ ಶ್ರೇಣಿಯಲ್ಲಿ ಇದೆ. ಇದು ಬೆಂಗಳೂರಿನಿಂದ ಸುಮಾರು 257 ಕಿಲೊಮೀಟರ್ ದೂರದಲ್ಲಿದೆ.

ಕೊಡಗಿನ ಆರ್ಥಿಕತೆಯು ಮುಖ್ಯವಾಗಿ ಸಾಂಪ್ರದಾಯಿಕ ಕೃಷಿ, ಪ್ಲಾಂಟೇಶನ್ ಕೃಷಿ (ಅರಣ್ಯ ತೋಟಗಾರಿಕೆ). ಅರಣ್ಯೀಕರಣ ಮತ್ತು ಪ್ರವಾಸೋದ್ಯಮವನ್ನು ಅವಲಂಬಿಸಿದೆ. ಈ ಪ್ರದೇಶವು ಕಾಫಿ ಬೆಳೆಗೆ ಹೆಸರಾಗಿದೆ. ಮಂತ್ರಮುಗ್ಧವಾಗಿಸುವ ಸೊಬಗಿನಿಂದ ಕೂಡಿದ ಗಿರಿಧಾಮವಾದ ಕೊಡಗು, ಹಲವಾರು ಸುಂದರ ಜಲಪಾತಗಳಿಂದ, ಚಹಾ ಮತ್ತು ಕಾಫಿ ತೋಟಗಳಿಂದ, ದಟ್ಟ ಅರಣ್ಯಗಳಿಂದ, ವೈವಿಧ್ಯಮಯ ಸಸ್ಯಸಂಕುಲ ಹಾಗೂ ಪ್ರಾಣಿಸಂಕುಲದಿಂದ ಕೂಡಿದ ಪ್ರದೇಶವಾಗಿದೆ. ಕಣ್ಮನ ಸೆಳೆಯುವ ಗಿರಿಶ್ರೇಣಿಗಳು ಹಾಗೂ ವಿವಿಧ ಧಾರ್ಮಿಕ ಕ್ಷೇತ್ರಗಳಿಂದಾಗಿ ಪ್ರವಾಸಿಗರ ಮೆಚ್ಚಿನ ತಾಣವಾಗಿದೆ.

ಹಸಿರನ್ನೇ ಉಸಿರಾಗಿಸಿಕೊಂಡಿರುವ, ನಿಸರ್ಗದ ರಹಸ್ಯಗಳನ್ನೇ ತನ್ನ ಭವ್ಯತೆಯನ್ನಾಗಿಸಿಕೊಂಡಿರುವ ಕೊಡಗನ್ನು 'ಭಾರತದ ಸ್ಕಾಟ್ಲಂಡ್' ಎಂದು ಕರೆಯುವುದಕ್ಕಿಂತ, ಸ್ಕಾಟ್ಲಂಡನ್ನೇ ಕೊಡಗಿಗೆ ಹೋಲಿಸುವುದು ಅತ್ಯಂತ ಸೂಕ್ತವಾಗಿದೆ.

## ಹಾರಂಗಿ ಜಲಾಶಯ


ಈ ಅಣೆಕಟ್ಟು ಕುಶಾಲನಗರಕ್ಕೆ ಸಮೀಪದಲ್ಲಿದೆ. ನಿಸರ್ಗಸಹಜ ಸೊಬಗಿನಿಂದ ಕಂಗೊಳಿಸುವ ಈ ಜಾಗವು ವಾರಾಂತ್ಯದ ಭೇಟಿಗೆ ಹೇಳಿ ಮಾಡಿಸಿದಂತಿದೆ. ಈಗ ಹಾರಂಗಿ ಜಲಾಶಯದ ಉದ್ಯಾನದಲ್ಲಿ ಸಂಗೀತಕಾರಂಜಿ ಕೂಡ ಪ್ರವಾಸಿಗರ ಮನತಣಿಸುತ್ತದೆ. ಪ್ರವಾಸಿಗರು ದೋಣಿ ವಿಹಾರ ಮತ್ತು ಜಲ ಕ್ರೀಡೆಗಳಂತಹ ವಿವಿಧ ಚಟುವಟಿಕೆಗಳನ್ನು ಆನಂದಿಸಬಹುದು.



## ಚಿಕ್ಲಿಹೊಳೆ ಜಲಾಶಯ

ಚಿಕ್ಲಿಹೊಳೆ ಜಲಾಶಯದ ಸುತ್ತಮುತ್ತಲ ಪ್ರದೇಶವು ಬಹಳ ಆಕರ್ಷಕವಾಗಿದೆ. ವಿಶೇಷವಾಗಿ ಈ ಜಾಗದಿಂದ ಸೂರ್ಯ ಮುಳುಗುವ ದೃಶ್ಯವು ರಮಣೀಯವಾಗಿ ಕಾಣುತ್ತದೆ. ಹಸಿರು ಹುಲ್ಲುಗಾವಲುಗಳು ಹಾಗೂ ದಟ್ಟ ಕಾಡುಗಳು ಈ ಪ್ರದೇಶವನ್ನು ಒಂದು ಅದ್ಭುತ ಪ್ರವಾಸಿತಾಣವನ್ನಾಗಿಸಿವೆ.





## ನಾಗರಹೊಳೆ

ನಾಗರಹೊಳೆ ರಾಷ್ಟ್ರೀಯ ಉದ್ಯಾನವನ್ನು ರಾಜೀವ್ ಗಾಂಧಿ ರಾಷ್ಟ್ರೀಯ ಉದ್ಯಾನ ಎಂದು ಸಹ ಕರೆಯಲಾಗುತ್ತದೆ. ಇದು ಕೊಡಗು ಹಾಗೂ ಮೈಸೂರು ಜಿಲ್ಲೆಗಳ ನಡುವೆ ಹರಡಿಕೊಂಡಿದೆ. ನಾಗರಹೊಳೆಯು ಈ ಉದ್ಯಾನದ ಮೂಲಕ ಹರಿದು ಕೊನೆಗೆ ಕಬಿನಿ ನದಿಯನ್ನು ಸೇರಿ, ನಾಗರಹೊಳೆ ಮತ್ತು ಬಂಡೀಪುರ ರಾಷ್ಟ್ರೀಯ ಉದ್ಯಾನಗಳ ನಡುವೆ ಗಡಿಯನ್ನು ಉಂಟುಮಾಡುತ್ತದೆ.

## ನಿಸರ್ಗಧಾಮ

ನಿಸರ್ಗಧಾಮ ಕಾವೇರಿ ನದಿಯ ದ್ವೀಪವೊಂದರಲ್ಲಿ ನಿರ್ಮಿಸಲಾಗಿರುವ, ಪ್ರಶಾಂತತೆಯಿಂದ ಕೂಡಿದ ರೆಸಾರ್ಟ್ ಆಗಿದೆ. ದಟ್ಟವಾದ ಕಾಡು ಬಿದಿರಿನ ನಳೆಗಳು ಹಾಗೂ ಅಪಾರ ವನ್ಯ ಜೀವಿಗಳಿಂದ ಕೂಡಿದ ಈ ಪ್ರದೇಶವು ಪ್ರಕೃತಿ ದೇವಿಯ ವರವಾಗಿದೆ. ಅರಣ್ಯ ಇಲಾಖೆಯು ನಿರ್ವಹಿಸುತ್ತಿರುವ ಅನೇಕ ಕುಟೀರಗಳಿದ್ದು, ಇವು ನದಿಯ ದಂಡೆಯ ಮೇಲಿವೆ. ಇದೊಂದು ಅತ್ಯಂತ ಆಕರ್ಷಣೀಯ ಪ್ರವಾಸಿ ತಾಣವಾಗಿದ್ದು, ಸಾಹಸ ಕ್ರೀಡೆ, ಪಕ್ಷಿ ವೀಕ್ಷಣೆ, ಉದ್ಯಾನವನ, ದೋಣಿ ಸವಾರಿ ಸೇವೆ ಲಭ್ಯವಿದೆ.




**ನಮ್ಮನ್ನು ಸಂಪರ್ಕಿಸಿ:**
ಉಪನಿರ್ದೇಶಕರ ಕಚೇರಿ
ಪ್ರವಾಸೋದ್ಯಮ ಇಲಾಖೆ
ಸ್ಟೂವರ್ಟ್ ಹಿಲ್ ರೋಡ್, ಮಡಿಕೇರಿ - 571 201
ಇ - ಮೇಲ್: ddkodagutourism@gmail.com
ಫೋನ್: 08272 200519




# ಕೊಡಗು
### ಸ್ವರ್ಗಕ್ಕೆ ಸ್ವಾಗತ



## ಆಸಕ್ತಿಕರ ತಾಣಗಳು

### ಮಡಿಕೇರಿ ಕೋಟೆ

ಈ ಭವ್ಯ ಕೋಟೆಯನ್ನು ಮುದ್ದುರಾಜನು 1681ರಲ್ಲಿ ನಿರ್ಮಿಸಿದನು. ಮೂಲತಃ ಮಣ್ಣಿನಿಂದ ನಿರ್ಮಿಸಲಾಗಿದ್ದ ಈ ಕೋಟೆಯನ್ನು ಟಿಪ್ಪು ಸುಲ್ತಾನನು ಗ್ರಾನೈಟ್ ಬಳಸಿ ಮರುನಿರ್ಮಾಣ ಮಾಡಿದನು. ಮುದ್ದುರಾಜನು ಇಲ್ಲಿ ಹುಲ್ಲಿನ ಮೇಲ್ಹಾವಣಿಯೊಂದರ ಅರಮನೆಯನ್ನು ಕೂಡ ನಿರ್ಮಿಸಿದ್ದನು. ಎರಡನೇ ಲಿಂಗರಾಜೇಂದ್ರ 1814ರಲ್ಲಿ ಇದನ್ನು ನವೀಕರಿಸಿದನು. ಆದಾದ ಮೇಲೆ ಬ್ರಿಟಿಷರು 1933ರಲ್ಲಿ ಇದಕ್ಕೆ ಒಂದು ಗಡಿಯಾರ ಗೋಪುರ ಹಾಗೂ ಮುಖಮಂಟಪದಲ್ಲಿ ಆನೆಗಳ ಶಿಲ್ಪಗಳನ್ನು ಜೋಡಿಸಿದರು. ಕೋಟೆಯಲ್ಲಿರುವ ವೀರಭದ್ರ ದೇವಾಲಯ ಚರ್ಚನ್ನು 1855ರಲ್ಲಿ ನಿರ್ಮಿಸಲಾಯಿತು. ಈ ಚರ್ಚ್ ಈಗ ಐತಿಹಾಸಿಕ ವಸ್ತುಗಳನ್ನು ಪ್ರದರ್ಶಿಸುವ ವಸ್ತುಸಂಗ್ರಹಾಲಯವಾಗಿದೆ.




## ರಾಜಾ ಸಮಾಧಿ (ಗದ್ದಿಗೆ)

ವೀರರಾಜೇಂದ್ರ, ಹಾಗೂ ಆತನ ಪತ್ನಿಯರ ಸಮಾಧಿಗಳು ಒಟ್ಟಿಗೆ ಇರುವ ಜಾಗ ಇದಾಗಿದೆ. ಲಿಂಗರಾಜೇಂದ್ರನ ಸಮಾಧಿ ಕೂಡ ಇಲ್ಲಿದ್ದು 1809ರಲ್ಲಿ ನಿರ್ಮಾಣವಾಗಿದ್ದರೆ, ವೀರರಾಜೇಂದ್ರನ ಸಮಾಧಿಯು 1821ರಲ್ಲಿ ನಿರ್ಮಾಣಗೊಂಡಿತು. ಮಧ್ಯಭಾಗದಲ್ಲಿ ಇಸ್ಲಾಮಿಕ್ ಶೈಲಿಯ ಗುಮ್ಮಟಗಳು ಹಾಗೂ ಮೂಲೆಗಳಲ್ಲಿ ಕಿರು ಗುಮ್ಮಟಗಳಿವೆ. ಇವುಗಳ ಪ್ರತಿಯೊಂದರ ಮೇಲೂ ಬಸವನ ಚಿತ್ರಗಳಿವೆ. ಇಲ್ಲಿನ ಕಿಟಕಿಗಳು ಆಕರ್ಷಕವಾದ ಮೆದು ಕಂಚಿನ ಸರಳುಗಳಿಂದ ಕೂಡಿದ್ದು, ಕೆತ್ತನೆ ಮಾಡಲಾದ ಕಲ್ಲಿಗೆ ಅಳವಡಿಸಲಾಗಿದೆ.



## ಮಕ್ಕಳ ಗುಡಿ ಬೆಟ್ಟ

ಕರ್ನಾಟಕದ ಹೃದಯಭಾಗದಲ್ಲಿ ನೆಲೆಸಿರುವ ಮಕ್ಕಳ ಗುಡಿ ಬೆಟ್ಟ ನಿಸರ್ಗದ ತೆಕ್ಕೆಗೆ, ಪ್ರಶಾಂತತೆಯನ್ನು ಅನುಭವಿಸಲು ಇರುವ ಗುಪ್ತ ರತ್ನವಾಗಿದೆ. ಈ ಬೆಟ್ಟ ಹಚ್ಚ ಹಸಿರಿನಿಂದ ಕಂಗೊಳಿಸುತ್ತದೆ ಮತ್ತು ಸುತ್ತಮುತ್ತಲಿನ ಭೂದೃಶ್ಯಗಳ ಉಸಿರುಕಟ್ಟುವ ವಿಹಂಗಮ ನೋಟವನ್ನು ಇಲ್ಲಿಂದ ಕಾಣಬಹುದು. ಪ್ರಕೃತಿ ಪ್ರಿಯರಿಗೆ ಮತ್ತು ಚಾರಣಿಗರಿಗೆ ಸೂಕ್ತವಾಡಾ ತಾಣ. ಮಕ್ಕಳ ಗುಡಿ ಬೆಟ್ಟ ಜೀವವೈವಿಧ್ಯತೆಯನ್ನು ಹೊಂದಿದೆ. ಇದು ಪಕ್ಷಿ ವೀಕ್ಷಕರು ಮತ್ತು ವನ್ಯಜೀವಿ ಪ್ರಿಯರಿಗೆ ಸ್ವರ್ಗವಾಗಿದೆ.



## ಗರ್ವಾಲೆ ಫಾಲ್ಸ್

ಕೊಡಗಿನ ಉತ್ತರ ಭಾಗದಲ್ಲಿ, ಜಿಲ್ಲೆಯ ಮೈಟ್ ಕೋಟೆ ಬೆಟ್ಟ, ಗರ್ವಾಲೆ ಗ್ರಾಮದ ಸಮೀಪ ನೆಲೆಸಿರುವ ಗರ್ವಾಲೆ ಜಲಪಾತದ ಬಗ್ಗೆ ಕೆಲವರಿಗೆ ಮಾತ್ರ ತಿಳಿದಿವೆ. ಸ್ವಲ್ಪ ದೂರ ಚಾರಣ ಮಾಡಿದರೆ ಪರ್ವತದಿಂದ ಬೀಳುವ ನೀರಿನ ಶಬ್ದವನ್ನು ಆಲಿಸಿ, ಸುಂದರ ಜಲಪಾತವನ್ನು ವೀಕ್ಷಿಸಬಹುದು.



## ತಲಕಾವೇರಿ

ಪವಿತ್ರ ಕಾವೇರಿ ನದಿಯ ಉಗಮಸ್ಥಾನವಾದ ಈ ಜಾಗವು ಪ್ರಮುಖವಾದ ಧಾರ್ಮಿಕ ಕ್ಷೇತ್ರವಾಗಿಯೂ ಗುರುತಿಸಿಕೊಂಡಿದೆ. ಸಾಮಾನ್ಯವಾಗಿ ಅಕ್ಟೋಬರ್ 17ರಂದು ಸಂಭವಿಸುವ ತುಲಾಸಂಕ್ರಮಣದ ದಿವಸ ಕಾವೇರಿಯ ಉಗಮ ಸ್ಥಳದಲ್ಲಿ ನೀರು ಉದ್ಭವವಾಗುವುದನ್ನು ನೋಡಲು ಸಾವಿರಾರು ಜನರು ಬರುತ್ತಾರೆ.



## ಭಾಗಮಂಡಲ

ತ್ರಿವೇಣಿ ಸಂಗಮ, ಅಂದರೆ ಮೂರು ನದಿಗಳಾದ ಕಾವೇರಿ, ಕನ್ನಿಕೆ ಮತ್ತು ಸುಜ್ಯೋತಿ ನದಿಗಳ ಸಂಗಮ ಕ್ಷೇತ್ರವಾದ ಇದು ಪವಿತ್ರ ಕ್ಷೇತ್ರವಾಗಿ ಹೆಸರಾಗಿದೆ. ಭವ್ಯವಾದ ಭಗಂಡೇಶ್ವರ ದೇವಸ್ಥಾನವು ವಿಶಾಲವಾದ ಪ್ರಾಕಾರವನ್ನು ಹೊಂದಿದ್ದು, ಕೆಂಪು ಹೆಂಚಿನ ಮೇಲುಹಾಸಿನೊಂದಿಗೆ ಕೇರಳ ಶೈಲಿಯಲ್ಲಿ ನಿರ್ಮಾಣಗೊಂಡಿದೆ.

## ಸರ್ಕಾರಿ ವಸ್ತುಸಂಗ್ರಹಾಲಯ

ವಸ್ತುಸಂಗ್ರಹಾಲಯವು ಮಡಿಕೇರಿ ಕೋಟೆ ಆವರಣದಲ್ಲಿರುವ ಚರ್ಚ್ ಕಟ್ಟಡದಲ್ಲಿ ನೆಲೆಯಾಗಿದೆ. ಕರ್ನಾಟಕ ಸರ್ಕಾರವು ಈ ವಸ್ತುಸಂಗ್ರಹಾಲಯವನ್ನು 1971ರಲ್ಲಿ ಸ್ಥಾಪಿಸಿತು. ರೋಮನ್ ಗಾಥಿಕ್ ಶೈಲಿಯಲ್ಲಿರುವ ಈ ಚರ್ಚ್ ಕಟ್ಟಡದಲ್ಲಿ ಜಿಲ್ಲೆಯ ಐತಿಹಾಸಿಕ, ಪಾರಂಪರಿಕ ಕಲಾತ್ಮಕ ವಸ್ತುಗಳನ್ನು ಸಂರಕ್ಷಿಸುವ ಹಾಗೂ ಪ್ರದರ್ಶಿಸುವ ಉದ್ದೇಶದಿಂದ ಇದನ್ನು ಸ್ಥಾಪಿಸಲಾಯಿತು.





## ಜನರಲ್ ತಿಮ್ಮಯ್ಯ ವಸ್ತುಸಂಗ್ರಹಾಲಯ


ನಾಲ್ಕು ವರ್ಷಗಳ ಕಾಲ ಅಂದರೆ 1957ರಿಂದ 1961ರವರೆಗೆ ಭಾರತದ ಸೇನಾ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ ಜನರಲ್ ಕೆ.ಎಸ್.ತಿಮ್ಮಯ್ಯ ಅವರು ಕೊಡಗಿನಲ್ಲಿ ದಂತಕಥೆ ಆಗಿದ್ದಾರೆ. ಮಡಿಕೇರಿಯಲ್ಲಿರುವ ಜನರಲ್ ತಿಮ್ಮಯ್ಯ ಸ್ಮಾರಕ ವಸ್ತುಸಂಗ್ರಹಾಲಯವು ಭಾರತದ ಮಹಾನ್ ಯೋಧರಲ್ಲಿ ಒಬ್ಬರಾದ ಜನರಲ್ ತಿಮ್ಮಯ್ಯನವರ ಸೇವೆ ಹಾಗೂ ಶೌರ್ಯದ ಬಗ್ಗೆ ಪರಿಚಯಿಸುತ್ತದೆ.





## ಅಬ್ಬೆ ಜಲಪಾತ

ಬೆಟ್ಟದ ಮೇಲಿನಿಂದ ಧುಮ್ಮಿಕ್ಕುವ ಜಲಧಾರೆಯು ನೋಡುಗರ ಕಣ್ಣಿಗೆ ಹಬ್ಬವೇ ಸರಿ. ಅಬ್ಬೆ ಜಲಪಾತದ ಚೇತೋಹಾರಿಯಾದ ತಂಪು ನೀರು ಹಾಗೂ ಸುತ್ತಲೂ ಇರುವ ಕಾಫಿ ಮತ್ತು ಏಲಕ್ಕಿ ಎಸ್ಟೇಟುಗಳ ಹಸಿರ ಸಿರಿಯು ಈ ಜಾಗವನ್ನು ಒಂದು ಜನಪ್ರಿಯ ಪಿಕ್ನಿಕ್ ತಾಣವನ್ನಾಗಿಸಿವೆ.



## ಮಲ್ಲಳ್ಳಿ ಜಲಪಾತ

ಕುಮಾರಧಾರಾ ನದಿಯು ಕುಕ್ಕೆ ಸುಬ್ರಹ್ಮಣ್ಯದ ಮಾರ್ಗವಾಗಿ ಮಂಗಳೂರಿನೆಡೆಗೆ ಹರಿಯುವಾಗ 120 ಅಡಿ ಎತ್ತರದಿಂದ ಬುಡಕ್ಕೆ ಧುಮ್ಮಿಕ್ಕುತ್ತದೆ. ನಂತರ ಮುಂದಕ್ಕೆ ಸಮುದ್ರದೆಡೆಗೆ ಸಾಗುತ್ತದೆ



## ಇರ್ಪು ಜಲಪಾತ

ಇರ್ಪು ಜಲಪಾತವು ಬ್ರಹ್ಮಗಿರಿ ಬೆಟ್ಟಗಳ ಮೇಲಿನಿಂದ ಕೊಡಗಿನ ಕುಟ್ಟಾ ಗ್ರಾಮದ ಬಳಿ ಧರೆಗಿಳಿಯುತ್ತದೆ. ಲಕ್ಷ್ಮಣತೀರ್ಥ ನದಿಯ ಉಪನದಿಯಾದ ಇದು ಪವಿತ್ರ ಕ್ಷೇತ್ರವಾಗಿಯೂ ಹೆಸರಾಗಿದೆ. ಸುಮಾರು 60 ಮೀಟರ್ ಎತ್ತರದಿಂದ ಕೆಳಕ್ಕಿಳಿಯುವ ನೀರು ನಂತರ ಕಾವೇರಿ ನದಿಯೊಂದಿಗೆ ಸೇರಿಕೊಳ್ಳುತ್ತದೆ. ರಾಮೇಶ್ವರ ದೇವಾಲಯ ಎಂದು ಕರೆಯಲಾಗುವ ಶಿವನ ದೇವಸ್ಥಾನವು ಸಮೀಪದಲ್ಲಿದೆ.



## ಚೆಲಾವರ ಜಲಪಾತ

ಇದು, ಕೊಡಗಿನ ಜಲಪಾತಗಳ ಪೈಕಿ ಅತ್ಯಂತ ಸೊಬಗಿನ ಜಲಪಾತವಾಗಿದೆ. ಈ ಜಾಗವನ್ನು ತಲುಪಲು ಕಾಡಿನ ಒಳಗೆ ಸುಮಾರು 200 ಮೀಟರ್‌ಗಳಷ್ಟು ದೂರ ನಡೆದು ಹೋಗಬೇಕು. ಎದುರಾಗುವ ದೃಶ್ಯವು ಎಂತಹವರನ್ನೂ ಮೂಕವಿಸ್ಮಿತರನ್ನಾಗಿಸುತ್ತದೆ.

## ಕೊಡಗಿನಲ್ಲಿ ಚಾರಣ ಮತ್ತು ದೀರ್ಘ ನಡಿಗೆ (ಹೈಕಿಂಗ್)

### ತಡಿಯಂಡಮೊಳ್

ಇದು ಕೊಡಗು ಜಿಲ್ಲೆಯ ಅತ್ಯಂತ ಎತ್ತರದ ಪ್ರದೇಶವಾಗಿದೆ. ಸಮುದ್ರಮಟ್ಟದಿಂದ 1748 ಮೀಟರ್ (5734 ಅಡಿ) ಎತ್ತರದಲ್ಲಿದ್ದು, ಚಾರಣಿಗರಿಗೆ ವಿಶೇಷ ಆಸಕ್ತಿಯ ಜಾಗವಾಗಿದೆ.



### ಪುಷ್ಪಗಿರಿ ಬೆಟ್ಟ

ಪುಷ್ಪಗಿರಿ ಅಥವಾ ಸುಬ್ರಹ್ಮಣ್ಯ ಬೆಟ್ಟ (5,676 ಅಡಿ) ಕೊಡಗಿನ ವಾಯುವ್ಯ ಭಾಗದಲ್ಲಿದೆ. ಇಲ್ಲಿ ಗಮನಸೆಳೆಯುವಂತಹ ಎರಡು ಗಿರಿಶೃಂಗಗಳಿವೆ. ನಡುವಿನ ಭಾಗವು ಮಡಿಕೇರಿಯಿಂದ ನೋಡಿದರೆ, ಒಂದು ದೈತ್ಯಾಕಾರದ ಎತ್ತಿನ ಕತ್ತಿನ ಉಬ್ಬಿನಂತೆ (ಡುಬ್ಬದಂತೆ) ಕಾಣುತ್ತದೆ.



### ಬ್ರಹ್ಮಗಿರಿ ಬೆಟ್ಟ

ಕಾವೇರಿ ನದಿಯ ಜನ್ಮಸ್ಥಳವಾದ ತಲಕಾವೇರಿಯಿಂದ ಸುಮಾರು 300 ಅಡಿ ಎತ್ತರದಲ್ಲಿರುವ ಬ್ರಹ್ಮಗಿರಿ ಶೃಂಗದೆಡೆಗೆ ಇರುವ ಜಾಗವು ಚಾರಣಿಗರು/ ಹೈಕಿಂಗ್ ಮಾಡುವವರನ್ನು ಕೈಬೀಸಿ ಕರೆಯುತ್ತದೆ. ಬೆರಗು ಮೂಡಿಸುವಂತಹ ಪರ್ವತಶೃಂಗಗಳು, ಹಸಿರಿನಿಂದ ಕಂಗೊಳಿಸುವ ಮಳೆಕಾಡುಗಳು, ರಭಸದಿಂದ ಹರಿಯುವ ತೊರೆಗಳು, ಹಲವಾರು ಜಲಪಾತಗಳು ಹಾಗೂ ಅದ್ಭುತ ಬೀಚ್ ಮರಗಳಿಂದ ಕೂಡಿದ ಪ್ರದೇಶ ಇದಾಗಿದೆ.



### ಮಂದಾಲಪಟ್ಟಿ

ಮಂದಾಲಪಟ್ಟಿಯು ಸಮುದ್ರಮಟ್ಟದಿಂದ 4.050 ಅಡಿ ಎತ್ತರದಲ್ಲಿರುವ ಪರ್ವತವಾಗಿದೆ. ಇದು ಪುಷ್ಪಗಿರಿ ಮೀಸಲು ಅರಣ್ಯ ಪ್ರದೇಶಕ್ಕೆ ಸೇರುತ್ತದೆ. ಸ್ಥಳೀಯವಾಗಿ ಈ ಜಾಗವನ್ನು ಮುಗಿಲುಪೇಟೆ ಎಂದು ಕರೆಯಲಾಗುತ್ತದೆ. ಈ ತಾಣವು ಸೂರ್ಯೋದಯ ಮತ್ತು ಸೂರ್ಯಾಸ್ತದ ನೋಟಕ್ಕೆ ಹೆಸರುವಾಸಿಯಾಗಿದೆ. ಪ್ರಕೃತಿಯ ಈ ಆಕರ್ಷಕ ತಾಣಕ್ಕೆ ಕಾಫಿ ಎಸ್ಟೇಟ್‌ಗಳ ಮೂಲಕ ಸಾಗಿ ನಿಮ್ಮ ಪ್ರವಾಸವನ್ನು ಸ್ಮರಣೀಯವಾಗಿಸಿ.



### ಕೋಟೆ ಬೆಟ್ಟ

ತಡಿಯಂಡಮೊಳ್ ಮತ್ತು ಬ್ರಹ್ಮಗಿರಿ ನಂತರ ಕೊಡಗಿನ ಮೂರನೇ ಅತ್ಯಂತ ಎತ್ತರದ ಪ್ರದೇಶ ಕೋಟೆ ಬೆಟ್ಟವಾಗಿದೆ. ಸಮುದ್ರಮಟ್ಟದಿಂದ ಸುಮಾರು 1620 ಮೀಟರ್ ಎತ್ತರದ ಪ್ರದೇಶದಲ್ಲಿದೆ. ಚಾರಣಿಗರಿಗೆ ಅತ್ಯಂತ ಪ್ರಿಯವಾದ ತಾಣವಾಗಿದೆ.

ಪ್ರತೀ 12 ವರ್ಷಗಳಿಗೊಮ್ಮೆ ನೀಲಿ ಕುರಂಜಿ ಇಲ್ಲಿ ಅರಳುತ್ತದೆ.



## ಕೊಡಗಿನಲ್ಲಿ ದೋಣಿವಿಹಾರ ಮತ್ತು ವೈಟ್ ವಾಟರ್ ರಾಫ್ಟಿಂಗ್

ಕೊಡಗಿನಲ್ಲಿ ದೋಣಿವಿಹಾರವು ನಿಜಕ್ಕೂ ರೋಮಾಂಚಕಾರಿ. ಇಲ್ಲಿನ ನಿಸರ್ಗಧಾಮದಲ್ಲಿ ಇಬ್ಬರು ಅಥವಾ ನಾಲ್ವರು ಕೂರಬಹುದಾದಂತಹ ಚಿಕ್ಕ ದೋಣಿಗಳು ಸಿಗುತ್ತವೆ. ಆನೆಗಳು ಸ್ನಾನ ಮಾಡುವುದನ್ನು ಹತ್ತಿರದಿಂದ ನೋಡಲು ಅವಕಾಶ ಕಲ್ಪಿಸುವ ದುಬಾರೆ ಅರಣ್ಯದಲ್ಲಿಯೂ ದೋಣಿ ವಿಹಾರ ಸೌಲಭ್ಯ ಇದೆ. ರಿವರ್ ರಾಫ್ಟಿಂಗ್ ಸಾಹಸ ಕ್ರೀಡೆಗಾಗಿ ನಿತ್ಯ ಹಲವಾರು ಪ್ರವಾಸಿಗರು ದುಬಾರೆಗೆ ಭೇಟಿ ನೀಡುತ್ತಾರೆ. ತೇರಾಳು ಗ್ರಾಮದ ಪೊನ್ನಂಬರೆ ಎಂಬಲ್ಲಿ ಬರಪೊಳೆ ಉಗಮಗೊಂಡು ಹಲವು ಕೈತೋಡು, ನದಿ, ತೊರೆಗಳನ್ನು ತನ್ನ ಒಡಲಿಗೆ ಸೇರಿಸಿಕೊಂಡು ಹರಿಯುತ್ತಿರುವ ನದಿಯ ಮೂಲಕ ವೈಟ್ ವಾಟರ್ ರಾಫ್ಟಿಂಗ್/ಜಲಕ್ರೀಡೆಯನ್ನು ಆಯೋಜಿಸಲಾಗಿದೆ.




### ದಿ ಗ್ರೇಟರ್ ರಾಜಾ ಸೀಟ್

ಮಡಿಕೇರಿಯ ಜನಪ್ರಿಯ ಪ್ರವಾಸಿತಾಣವಾದ ರಾಜಾ ಸೀಟ್ ಅಂದರೆ 'ರಾಜರ ಆಸನ' ಎಂದು ಅಕ್ಷರಶಃ ಅರ್ಥ. ಇದು ಚೈತನ್ಯದಾಯಕ ಪರಿಸರದಲ್ಲಿದ್ದು ಮನಸ್ಸಿಗೆ ಪ್ರಶಾಂತತೆಯನ್ನು ಮೂಡಿಸುತ್ತದೆ. ಈಗ ಇಲ್ಲಿ ಸುತ್ತ ಇರುವ ಮಂಜಿನಿಂದ ಆವೃತವಾದ ಪರ್ವತಶ್ರೇಣಿಗಳನ್ನು ಇನ್ನೂ ಉತ್ತಮವಾಗಿ ನೋಡಲು ದಿ ಗ್ರೇಟರ್ ರಾಜಾ ಸೀಟ್ ಅನ್ನು ಅಭಿವೃದ್ಧಿಪಡಿಸಲಾಗಿದೆ.



### ಗಾಲ್ಫ್ ಕ್ಲಬ್

ದೇಶದ ಎರಡು ಉತ್ಕೃಷ್ಟ ಗಾಲ್ಫ್ ಕ್ಲಬ್ ಗಳಿರುವ ಪ್ರದೇಶ ಇದಾಗಿದೆ. ಇವುಗಳ ಪೈಕಿ ಒಂದು ಮಡಿಕೇರಿಯಲ್ಲಿದ್ದರೆ, ಮತ್ತೊಂದು, ಪೊಲಿ ಬೆಟ್ಟದಲ್ಲಿ 9 ಕುಳಿಗಳ ಗಾಲ್ಫ್ ಕೋರ್ಸ್ ಇದೆ.



### ಸಾಲುಮರದ ತಿಮ್ಮಕ್ಕ ವೃಕ್ಷೋದ್ಯಾನ

ವರ್ಷ 2019ರಲ್ಲಿ ಪದ್ಮಶ್ರೀ ಪ್ರಶಸ್ತಿಗೆ ಪಾತ್ರರಾದ ಸಾಲುಮರದ ತಿಮ್ಮಕ್ಕ ಅವರು ಸುಮಾರು 400 ಆಲದ ಮರಗಳನ್ನು ಬೆಳೆಸಿದ್ದು, ಇವು ಹುಲಿಕಲ್ ಮತ್ತು ಕುದೂರು ಹೆದ್ದಾರಿಯ ನಡುವೆ 45 ಕಿಲೋಮೀಟರ್ ಉದ್ದಕ್ಕೂ ಹರಡಿಕೊಂಡಿವೆ. ಇಂತಹ ಸಾಧಕಿಯ ನೆನಪಿನಲ್ಲಿ ಸ್ಥಾಪಿಸಿರುವ ವೃಕೋದ್ಯಾನವು ಮಡಿಕೇರಿಯ ರಾಜಾ ಸೀಟ್‌ನಿಂದ 8 ಕಿಲೊಮೀಟರ್ ದೂರದಲ್ಲಿದೆ. ಮಕ್ಕಳ ಉದ್ಯಾನ, ನಿಸರ್ಗ ನಡಿಗೆ ಹಾಗೂ ಕೊಡಗು ನಗರದ ವಿಹಂಗಮ ನೋಟವನ್ನು ತೋರಿಸುವ ಗಾಜಿನ ಕ್ಯಾಂಟೀನನ್ನು ಇದು ಒಳಗೊಂಡಿದೆ.






## ಪ್ಲಾಂಟೇಷನ್ (ಅರಣ್ಯ ತೋಟಗಾರಿಕೆ)

### ಕಾಫಿ

ಕಾಫಿಯು ವಿದೇಶಿ ವಿನಿಮಯವನ್ನು ತರುತ್ತಿರುವ ಪ್ರಮುಖ ಪ್ಲಾಂಟೇಷನ್ ಬೆಳೆಗಳಲ್ಲಿ ಒಂದಾಗಿದೆ. ಇಲ್ಲಿ ರೊಬಸ್ಟಾ ಮತ್ತು ಅರೇಬಿಕಾ ತಳಿಯ ಕಾಫಿಯನ್ನು ಬೆಳೆಯಲಾಗುತ್ತದೆ. ಕೊಡಗಿನ ಅರಸನ ಕಾಲದಲ್ಲಿ ಮುಸ್ಲಿಮರು ನಾಲ್ಕುನಾಡು ಪ್ರದೇಶದಲ್ಲಿ ಕಾಫಿ ಪ್ಲಾಂಟೇಷನ್ ಗಳನ್ನು ಆರಂಭಿಸಿದರು. ಕೊಡಗಿನಲ್ಲಿ 1947ರಲ್ಲಿ ಚೆಟ್ಟಳ್ಳಿ ಕಾಫಿ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲಾಯಿತು. ಕಾಫಿ ಗಿಡವು ಬೆಳೆಸಲು ಆರಂಭಿಸಿದ ಮೂರು ವರ್ಷಗಳ ನಂತರ ಬೆಳೆ ಕೊಡಲು ಶುರು ಮಾಡುತ್ತದೆ. ಕಾಫಿ ಗಿಡದ ಜೀವಿತಾವಧಿಯು ಸುಮಾರು ನಂತರ ಬೆಳೆ ಕೊಡಲು ಶುರು ಮಾಡುತ್ತದೆ. ಕಾಫಿ ಗಿಡದ ಜೀವಿತಾವಧಿಯು ಸುಮಾರು 35-50 ವರ್ಷಗಳು.

### ಏಲಕ್ಕಿ

ಏಲಕ್ಕಿಯು ಜಗತ್ತಿನ ಅತ್ಯಂತ ಪ್ರಮುಖ ಹಾಗೂ ದುಬಾರಿ ಸಾಂಬಾರ ಪದಾರ್ಥಗಳ ಪೈಕಿ ಒಂದಾಗಿದೆ. ಮುಂಚೆ ಏಲಕ್ಕಿಯು ಅರಣ್ಯಗಳಲ್ಲಿ ಬೆಳೆಯುತ್ತಿತ್ತು. ನಂತರ ಅದನ್ನು ವಾಣಿಜ್ಯ ಬೆಳೆಯಾಗಿ ದೊಡ್ಡ ಪ್ರಮಾಣದಲ್ಲಿ ಬೆಳೆಯಲು ಆರಂಭಿಸಲಾಯಿತು. ಏಲಕ್ಕಿಯನ್ನು 'ಸಾಂಬಾರ ಪದಾರ್ಥಗಳ ರಾಣಿ' ಎನ್ನಲಾಗುತ್ತದೆ. ಇದನ್ನು 'ಹಸಿರು ಬಂಗಾರ' ಎಂದೂ ಕರೆಯಲಾಗುತ್ತದೆ .





### ಕಿತ್ತಳೆ

ಕಿತ್ತಳೆಯು ಕೊಡಗಿನ ಮೂರನೇ ಪ್ರಮುಖ ಬೆಳೆಯಾಗಿದೆ. ರಾಜರ ಕಾಲದಲ್ಲಿ ಕೂಡ ಇಲ್ಲಿ ಕಿತ್ತಳೆ ತೋಟಗಳು ಇದ್ದವು. ಕೊಡಗಿನ ಕಿತ್ತಳೆಯು ಆಕರ್ಷಕ ಆಕಾರ, ಬಣ್ಣ ಹಾಗೂ ವಿಶೇ ಷವಾದ ರುಚಿಗೆ ಹೆಸರಾಗಿದೆ.

### ಕೊಡಗಿನ ಪಾಕವೈವಿಧ್ಯ

ಕೊಡಗಿನ ಪಾಕವೈವಿಧ್ಯವು ಜನಸಮುದಾಯದ ಇತಿಹಾಸ ಮತ್ತು ಸಂಸ್ಕೃತಿಯಿಂದ ಪ್ರಭಾವಿತವಾಗಿದೆ. ಕುಸುಬಲಅಕ್ಕಿ (ಬಾಯಿಲ್ಡ್ ರೈಸ್) ಹಾಗೂ ಭತ್ತದ ಅಕ್ಕಿ ಇಲ್ಲಿನ ಪ್ರಮುಖ ಆಹಾರಗಳಾಗಿವೆ. ಜೊತೆಗೆ ಚಪಾತಿ, ಅಕ್ಕಿರೊಟ್ಟಿ, ಕಡುಂಬುಟ್ಟು, ಪಾಪುಟ್ಟು, ತಾಲಿಪಟ್ಟು ಕೊಡಗಿನ ವಿಶಿಷ್ಟ ಖಾದ್ಯಗಳಾಗಿವೆ.





## ಉತ್ಸವಗಳು ಹಾಗೂ ಹಬ್ಬಗಳು

### ಪುತ್ತರಿ

ಪುತ್ತರಿ ಎಂದು ಕರೆಯಲಾಗುವ ಸುಗ್ಗಿ ಹಬ್ಬವು ಕೊಡಗಿನ ಪ್ರಮುಖ ಹಬ್ಬಗಳ ಪೈಕಿ ಒಂದಾಗಿದೆ. ಮನೆಯ ಯಜಮಾನನು ಹುಣ್ಣಿಮೆಯ ರಾತ್ರಿಯಂದು 'ಪೊಲಿ, ಪೊಲಿ, ದೇವಾ' (ಓ ದೇವನೇ, ನಮಗೆ ಒಳ್ಳೆಯ ಬೆಳೆಯನ್ನು ಕೊಡು) ಎಂದು ಮೊರೆಯಿಡುತ್ತಾ ಧಾರ್ಮಿಕ ವಿಧಿಗಳೊಂದಿಗೆ ಹೊಸ ಭತ್ತದ ಬೆಳೆಯನ್ನು ಮೊದಲಿಗೆ ಕೊಯ್ದು ಮಾಡುವ ಸಂದರ್ಭ ಇದಾಗಿರುತ್ತದೆ. ಈ ವೇಳೆ ಕೊಡವರ ಆರಾಧ್ಯದೇವನಾದ ಇಗುತ್ತಪ್ಪನನ್ನು ಆಹ್ವಾನಿಸಲು ಗಾಳಿಯಲ್ಲಿ ಒಂದು ಸುತ್ತು ಗುಂಡು ಹಾರಿಸಲಾಗುತ್ತದೆ.

### ಮಡಿಕೇರಿಯಲ್ಲಿ ದಸರಾ ಉತ್ಸವ

ಇಲ್ಲಿ ದಸರಾ ಉತ್ಸವವನ್ನು ಸೆಪ್ಟೆಂಬರ್ - ಅಕ್ಟೋಬರ್ ತಿಂಗಳಲ್ಲಿ ಆಚರಿಸಲಾಗುತ್ತದೆ. ವಿದ್ಯುದ್ದೀಪಗಳಿಂದ ಅಲಂಕೃತವಾದ ದೇವಸ್ಥಾನದ ರಥಗಳನ್ನು ವರ್ಣರಂಜಿತ ಮೆರವಣಿಗೆಯೊಂದಿಗೆ ಎಳೆಯಲಾಗುತ್ತದೆ.



# ಕೊಡಗು ಜಿಲ್ಲೆ




Raja's Seat

Raja's Tomb

Nagarahole

Government Museum

Abbey Falls

Mallalli Falls

Irpu Falls

Chelavara falls

Dubare Elephant Camp

Nisargadhama

Nalknad Aramane

Omkareshwara Temple

Harangi Dam

Chiklihole Reservoir

Kote Betta

Tadiandamol

Pushpagiri Hill

Brahmagiri Hill

Mandalapatti

Bhagamandala

Talacauvery

General Thimmaiah Museum